ರಾಣೆಕೆರೆ ಫೀಡರ್ ಚಾನಲ್ ಅಭಿವೃದ್ಧಿ

53 (127) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ):– ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಚಳ್ಳಕೆರೆ ವ್ಯಾಪ್ತಿಯಲ್ಲಿ ಬರುವ ರಾಣೆಕೆರೆಗೆ ವೇದಾವತಿ ನದಿಯಿಂದ ನಿರ್ಮಿಸಲಾಗಿರುವ ಫೀಡರ್ ಚಾನೆಲ್ ನಿರ್ಮಿಸಿ ಎಷ್ಟು ವರ್ಷಗಳಾಯಿತು.

ಆ) ಇದರಿಂದ ರಾಣೆಕೆರೆಗೆ ನೀರು ಸರಬರಾಜು ಆಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ 4 ವರ್ಷದಿಂದ ಈ ರಾಣೆಕೆರೆ ಫೀಡರ್ ಚಾನೆಲ್ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಲು ಕೋರಿಕೆ ಸಲ್ಲಿಸಿದ್ದರು ಅನುದಾನ ಬಿಡುಗಡೆ ಮಾಡದಿರಲು ಕಾರಣಗಳೇನು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ಚಳ್ಳಕೆರೆ ವ್ಯಾಪ್ತಿಯಲ್ಲಿ ಬರುವ ರಾಣೆಕೆರೆಗೆ ವೇದಾವತಿ ನದಿಯಿಂದ ನಿರ್ಮಿಲಾಗಿರುವ ಫೀಡರ್ ಚಾನಲ್ ನಿರ್ಮಾಣವನ್ನು 1977–78ನೇ ಆರ್ಥಿಕ ವರ್ಷದಲ್ಲಿ ಮೊದಲನೇ ಹಂತದ ಕಾಮಗಾರಿಯನ್ನು ಪ್ರಾರಂಭಿಸಿ, 1997–98ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲಾಗಿರುತ್ತದೆ.

ಆ) ಬಂದಿರುತ್ತದೆ.

ಇ) ರಾಣೆಕೆರೆ ಪೂರಕ ನಾಲೆಯ ವಿವರವಾದ ಯೋಜನಾ ವರದಿ ಸಿದ್ದಪಡಿಸಿದ್ದು, ಆಡಳಿತಾತ್ಮಕ ಅನುಮೋದನೆ ನೀಡಿ ನಂತರ ಕರ್ನಾಟಕ ನೀರಾವರಿ ನಿಗಮದ ಪ್ರಸ್ತುತ ಸಾಲಿನ ಅನುದಾನದ ಅಡಿಯಲ್ಲಿ ಕೂಡಲೇ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು.

ಅಮಾನತುಪಡಿಸಿಕೊಳ್ಳಲಾದ ವಾಹನಗಳ ವಿವರ

56 (4) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ):– ಮಾನ್ಯ ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–